ಹೋಗುತ್ತೀಯೋ, ಇಲ್ಲವೋ?'' ''ನಿನ್ನ ಅತ್ತಿಗೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೋ?'' – ಹೀಗೆಲ್ಲ ಏನೋ ಒಂದು ಕೇಳುತ್ತಲೇ ಇರುವರು. ಆ ಮಧ್ಯಾಹ್ನ ಅವನು, ''ರಸ್ತೆ ಮೈಲಿಗೆ ಆಗಿಬಿಟ್ಟಿದೆ, ಇನ್ನೊಮ್ಮೆ ಮೀಯಬೇಕು'' ಎಂದು ನಮ್ಮನ್ನು ಕೇಳಿ ಪಂಜಿ ತೆಗೆದುಕೊಂಡು ಸ್ನಾನ ಮಾಡಿದ. ಬಳಿಕ ಅಜ್ಜಿಮನೆ ದೇವಸ್ಥಾನದೊಳಕ್ಕೆ ಹೋಗಿ, ''ಶಿವಾ, ನಾಳೆ ನಿನ್ನ ಪೂಜೆ ಮಾಡ್ತೇನೆ, ಇವತ್ತು ನಿನ್ನ ಅಣ್ಣ ಮಹಾಬಲೇಶ್ವರನ ಪೂಜೆ ಮಾಡ್ಕಂಡು ಬಂದೆ'' ಎಂದು ಜೋರಾಗಿ ಗಂಟೆ ಬಾರಿಸಿದ. ''ಗಣಪತಿ, ಆರಾಮನೋ?'' ''ಸದಾಶಿವಮ್ಮ, ಆರಾಮಿದ್ಯ?'' ಎಂದು ಅವನು ಕೇಳಿದ್ದು ಅಲ್ಲಿರುವ ಗಣಪತಿ, ದೇವಿ ವಿಗ್ರಹಗಳಿಗೆ. ಇದೆಲ್ಲ ಮುಗಿಸಿ ಊಟಕ್ಕ ಬಂದು ಕುಳಿತವ, ''ಪಾತಕ್ಕ, ರಾಶಿ ಹಸಿವು, ಅನ್ನ ಸಾಕಕ್ಕ?'' ಅಂದ. ''ನೀನು ಹೊಟ್ಟೆ ತುಂಬಾ ಊಟ ಮಾಡು. ಸಾಕಾಗದೇ ಹೋದ್ರೆ ಅನ್ನ ಮಾಡಲು ಎಷ್ಟು ಹೊತ್ತು?'' ಎಂದಳು ಅಜ್ಜಮ್ಮ. ಚರಿಗೆ ಅನ್ನ ನಿರಾಯಾಸವಾಗಿ ಅವನು ಖಾಲಿ ಮಾಡಿದ್ದನ್ನು ಕಂಡು ನಾವು ಬೆಕ್ಕಸ ಬೆರಗಾದೆವು. ಹಾಗೆ ನಗಬಾರದೆಂದು ನಮ್ಮ ಅಜ್ಜ ಕಣ್ಣಿನಿಂದಲೇ ಕಡಿವಾಣ ಹಾಕುತ್ತಿದ್ದರು. ಊಟ ಮುಗಿಸಿ ಒಂದು ಚಾಪೆ ಕೇಳಿ ಪಡೆದು ಒಳ್ಳೇ ಗಾಳಿ ಬರುವತ್ತ ಅಂಗಳದಲ್ಲಿ ಹಾಸಿಕೊಂಡು ಮಲಗಿದ ಕೇಶಮಳ್ಳ ಎದ್ದಾಗ ಸೂರ್ಯ ಮುಳುಗಿದ್ದ, ಸಂಜೆಯ ಬಿಸಿಲಲ್ಲಿ ನಂಜಟ್ಲೆ ಗಿಡ ಹೊಳೆಯುತ್ತಿತ್ತು. ಇಷ್ಟರಲ್ಲಿ ಕೇಶಪ್ಪಚ್ಚಿಯ (ಕೇಶಮಳ್ಳ) ಕುರಿತು ಅಜ್ಜಮ್ಮ ಸ್ವಲ್ಪ ಪರಿಚಯ ಹೇಳಿದ್ದಳು. ಅದರಲ್ಲಿ ನಮಗೆ ಅರ್ಥವಾಗಿದ್ದು ಕಡಿಮೆ. ''ನೊಂದವನು ಅವನು. ಕೀಟಲೆ ಮಾಡಿ ನೋಯಿಸಬೇಡಿ'' ಎಂಬುದಷ್ಟೇ ನಮಗೆ ಅರ್ಥವಾಗಿದ್ದು.

ನಮಗಂತೂ ಅವನು ನೊಂದವನಂತೆ ಕಾಣಿಸಲಿಲ್ಲ. ಅವನ ಬಾಯಿಂದ ಬರುತ್ತಿದ್ದ ಗಾದೆ ಮಾತುಗಳನ್ನು ಕೇಳಿ ನಾವು ಬಿದ್ದು ಬಿದ್ದು ನಗತೊಡಗಿದೆವು. ಮೀಸೆ ಹಣ್ಣಾದ ಹಿರಿಯನಾಗಿದ್ದರೂ ಅವನ ಹೆಚ್ಚಿನ ವ್ಯವಹಾರ ನಮ್ಮ ಜೊತೆಗೇ. ಆದರೆ, ಹಿರಿಯರ ಜಗತ್ತಿನಲ್ಲೂ ಅವನು ಲೀಲಾಜಾಲವಾಗಿ ಪ್ರವೇಶಿಸಿ ಗಾಂಭೀರ್ಯದಿಂದ ಎಲ್ಲ ಮಾತುಗಳನ್ನೂ ಕೇಳಿಸಿಕೊಳ್ಳುತ್ತಿದ್ದ. ಆಗ ನಾವು ಅವನೊಡನೆ ಮಾತಾಡುವಂತಿರಲಿಲ್ಲ. ಹಿರಿಯರ ಗೋಷ್ಠಿಯಲ್ಲಿ ಇವನನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಲೇ ಇರಲಿಲ್ಲ. ಅಲ್ಲಿಯ ಮಾತು ಕೇಳಿ ಸಾಕಾದ ಮೇಲೆ ಮತ್ತೆ ನಮ್ಮ ಜೊತೆ ಸೇರುತ್ತಿದ್ದ. ಈಗ ಅವನು ನಮ್ಮ ಕೂಟದ ಹಿರಿಯ ಗೆಳೆಯ. ಅವನ ಮಾರ್ಗದರ್ಶನದಲ್ಲಿ ಚಿತ್ರ ವಿಚಿತ್ರವಾಗಿ ನಾವು ಏನೇನೋ ಮಾಡಿಬಿಡುತ್ತಿದ್ದೆವು. ಹಾಗೆ ನಾವು ಬೈಸಿಕೊಳ್ಳಬೇಕಾಗಿ ಬಂದಾಗ, ''ಇರಲಿ ಬಿಡು ಪಾತಕ್ಕಾ, ಮಕ್ಕಳಲ್ಲವೇ? ಅವರಿಗೇನು ತಿಳಿಯುತ್ತದೆ?'' ಎಂದು ನಮ್ಮ ಪರ ವಹಿಸಿ ಮಾತಾಡುತ್ತಿದ್ದ. ನಮ್ಮ ಪರವಾಗಿ ಹೀಗೆ ಮಾತನಾಡುವ ವಿಶ್ವಾಸಾರ್ಹ ನಾಯಕನ ಅವಶ್ಯಕತೆ ನಮಗೆ ತುಂಬಾ ಇತ್ತು. ನಮ್ಮ ಕೀಟಲೆಗಳೇ ಹಾಗಿದ್ದವು. ನಾವೆಲ್ಲರೂ ಅವನನ್ನು ಕೇಶಪ್ಪಚ್ಚಿ ಎಂದು ಎದುರುಗಡೆಯಿಂದ ಕರೆದರೂ ಅದರ ಬೇರು ಕೇಶಮಳ್ಳ ಎಂಬ ಮೂಲಪದದಲ್ಲೇ ಅಡಗಿತ್ತು. ಜನರು ತನ್ನನ್ನು ಹಾಗೇ ಕರೆಯುವುದು ಎಂದು ಅವನಿಗೂ ಗೊತ್ತಿತ್ತು.

ಈಗ ಅನಿಸುತ್ತದೆ, ಹಾಗೆ ಮಳ್ಳ ಹೇಳಿಸಿಕೊಂಡಿದ್ದರಿಂದ ಅವನಿಗೆ ಅನೇಕ ಲಾಭಗಳಿದ್ದವು. ಅವನು ಏನು ಬೇಕಾದರೂ ಮಾಡಬಹುದಿತ್ತು, ಜನರು ನಕ್ಕು ಸುಮ್ಮನಾಗುತ್ತಿದ್ದರು. ಹಾಗೆಂದು ಅವನು ಏನು ಬೇಕಾದರೂ ಮಾಡುತ್ತಿದ್ದನೇ? ಇಲ್ಲ ಅಂತಲೇ ಅನಿಸುತ್ತದೆ. ಆದರೆ, ಒಂದು ಮಾತು, ಜೀವನಕ್ಕಾಗಿ ಅವನು ದುಡಿಯಬೇಕಾಗಿರಲಿಲ್ಲ. ಯಾರೋ ಅವನಿಗೆ ಹೊಟ್ಟೆ ತುಂಬ ಬಡಿಸುತ್ತಿದ್ದರು, ಹಾಗೆಂದು ಎಲ್ಲೆಲ್ಲಿಗೋ ಹೋಗಿ ಬೇಡಿ ತಿನ್ನುತ್ತಿದ್ದನೆಂದು ಅರ್ಥವಲ್ಲ. ಸಂಬಂಧಿಕರ ಮನೆಗಳಲ್ಲೇ ಅವನು ಉಣ್ಣುತ್ತಿದ್ದುದು. ಯಾರೂ ಅವನಿಗೆ 'ಯಾಕೆ ಬಂದೆ?' ಅನ್ನುತ್ತಿರಲಿಲ್ಲ. ಮಾದೇವಕ್ಕ, ಲಕ್ಷ್ಮಕ್ಕ, ವಿದ್ಯಕ್ಕ, ವೆಂಟುಮಾವ, ಕೃಷ್ಣಣ್ಣ ಹೀಗೆ ಊರ ತುಂಬಾ ಅವನಿಗೆ ಅಣ್ಣ, ಅಕ್ಕಂದಿರು. ದೇವಸ್ಥಾನಕ್ಕೆ ಹೊರಟವರ ಕೈಲಿ ಭಾರವಾದ ಹರಿವಾಣವಿದ್ದರೆ ಇವನೇ ಅದನ್ನು